VIDYAVARDHAKA LAW COLLEGE LIBRARY MYSURU

0201/2046/0521

# II Semester 3 Yr. LL.B./VI Semester 5 Yr. B.A. LL.B./B.A. LL.B. (Maj-Min-System)/B.B.A. LL.B./V Semester 5 Yr. B.A. LL.B./B.B.A. LL.B. Examination, November/December 2020
## CONTRACT – II
## (Old & New Batch)

Duration : 3 Hours | Max. Marks : 100

**Instructions :** 1. **Answer Question No. 9 and any five of the remaining questions.**

2. **Q. No. 9 carries 20 marks and the remaining questions carry 16 marks each.**

3. **Answers should be written either in English or Kannada completely.**

**ಸೂಚನೆಗಳು :** 1. ಪ್ರಶ್ನೆ ಸಂಖ್ಯೆ 9ಕ್ಕೆ ಮತ್ತು ಉಳಿದ ಐದು ಪ್ರಶ್ನೆಗಳಿಗೆ ಉತ್ತರಿಸಿರಿ.

2. ಪ್ರಶ್ನೆಸಂಖ್ಯೆ 9ಕ್ಕೆ 20 ಅಂಕಗಳು, ಉಳಿದ ಪ್ರಶ್ನೆಗಳಿಗೆ ತಲಾ 16 ಅಂಕಗಳು.

3. ಉತ್ತರಗಳನ್ನು ಸಂಪೂರ್ಣವಾಗಿ ಆಂಗ್ಲ ಮಾಧ್ಯಮ ಅಥವಾ ಕನ್ನಡದಲ್ಲಿ ಉತ್ತರಿಸಿ.

Q. No. 1. Define Contract of Guarantee. Explain the rights of surity. Marks : 16

ಜಾಮೀನುದಾರಿಕೆ ಕರಾರನ್ನು ವ್ಯಾಖ್ಯಾನಿಸಿರಿ. ಜಾಮೀನುದಾರನ ಹಕ್ಕುಗಳನ್ನು ವಿವರಿಸಿರಿ.

Q. No. 2. What is Bailment ? Explain the rights and duties of Bailee. Marks : 16

ನಿಕ್ಷೇಪಣೆ ಎಂದರೇನು ? ನಿಕ್ಷೇಪಿತನ (ಸರಕು ಪಡೆದವನ) ಹಕ್ಕುಗಳನ್ನು ಮತ್ತು ಕರ್ತವ್ಯಗಳನ್ನು ವಿವರಿಸಿರಿ.

Q. No. 3. Define 'Agency by Ratification'. Explain its essential elements. Marks : 16

'ದೃಢೀಕರಣದಿಂದ ಕಾರ್ಯಭಾರ'ವನ್ನು ವ್ಯಾಖ್ಯಾನಿಸಿರಿ. ಅದರ ಅವಶ್ಯಕ ಅಂಶಗಳನ್ನು ವಿವರಿಸಿರಿ.

Q. No. 4. What is meant by dissolution of a partnership firm ? What are the different modes of dissolution ? Marks : 16

ಒಂದು ಪಾಲುದಾರಿಕೆ ಸಂಸ್ಥೆಯ ವಿಸರ್ಜನೆ ಎಂದರೇನು ? ವಿಸರ್ಜನೆಯ ವಿವಿಧ ವಿಧಾನಗಳು ಯಾವುವು ?

P.T.O.

Q. No. 5. Explain Condition and Warranty. Write the differences between them. Marks : 16

ಷರತ್ತು ಮತ್ತು ಭರವಸೆಯನ್ನು ವಿವರಿಸಿರಿ. ಅವುಗಳ ನಡುವಿನ ವ್ಯತ್ಯಾಸಗಳನ್ನು ಬರೆಯಿರಿ.

Q. No. 6. What is Pledge ? Explain the rights of pledgee. Marks : 16

ಒತ್ತೆ (ಗಿರವಿ) ಎಂದರೇನು ? ಒತ್ತೆ ಇಟ್ಟುಕೊಂಡವನ ಹಕ್ಕುಗಳನ್ನು ವಿವರಿಸಿರಿ.

Q. No. 7. Write on 'Admission', 'Retirement' and 'Expulsion' of partners. Marks : 16

ಪಾಲುದಾರರ ಸೇರ್ಪಡೆ, ನಿವೃತ್ತಿ ಮತ್ತು ಉಚ್ಚಾಟನೆಯ ಕುರಿತು ಬರೆಯಿರಿ.

Q. No. 8. Write short note on **any two** of the following : Marks : 2×8=16

ಕೆಳಗಿನವುಗಳಲ್ಲಿ ಯಾವುದೇ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

(a) Contract of Indemnity.
ನಷ್ಟಭರ್ತಿ ಕರಾರು.

(b) Duties of an Agent.
ಕಾರ್ಯಭಾರಿಯ ಕರ್ತವ್ಯಗಳು.

(c) "No one can transfer a better title than he himself has" under Sale of Goods Act.
"ಯಾವುದೇ ವ್ಯಕ್ತಿಯು ತನ್ನಲ್ಲಿರುವ ಮಾಲಿಕತ್ವಕ್ಕಿಂತ ಹೆಚ್ಚಿನದನ್ನು ಹಸ್ತಾಂತರ ಮಾಡಲಾರ" – ಸರಕು ಮಾರಾಟ ಅಧಿನಿಯಮದಡಿಯಲ್ಲಿ.

Q. No. 9. Solve **any two** of the following problems : Marks : 2×10=20

ಈ ಕೆಳಗಿನ ಸಮಸ್ಯೆಗಳಲ್ಲಿ ಯಾವುದೇ **ಎರಡನ್ನು** ಬಗೆಹರಿಸಿರಿ :

(a) 'A' finds B's article and voluntarily spent Rs. 2,000/- to preserve the article and to find out the owner. B, the owner, has refused to pay that amount to 'A'. 'A' wants to sue 'B' to recover that amount. Advise 'A'.
'ಅ'ನಿಗೆ 'ಬ'ನ ಒಂದು ವಸ್ತು ಸಿಗುತ್ತದೆ. ಆ ವಸ್ತುವನ್ನು ಸುರಕ್ಷಿತವಾಗಿಡಲು ಮತ್ತು ಅದರ ಮಾಲಿಕನನ್ನು ಹುಡುಕಲು 'ಅ'ನು ಸ್ವಇಚ್ಛೆಯಿಂದ ಎರಡು ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಾನೆ. ಆ ವಸ್ತುವಿನ ಮಾಲಿಕನಾದ 'ಬ'ನು ಆ ಮೊತ್ತವನ್ನು 'ಅ'ನಿಗೆ ಕೊಡಲು ನಿರಾಕರಿಸುತ್ತಾನೆ. 'ಅ'ನು ಆ ಮೊತ್ತವನ್ನು ವಸೂಲಿ ಮಾಡಲು 'ಬ'ನ ವಿರುದ್ಧ ದಾವೆ ಹೂಡಲು ಬಯಸುತ್ತಾನೆ. 'ಅ'ಗೆ ಸಲಹೆಯನ್ನು ನೀಡಿರಿ.

(b) 'A' gave a golden ring to 'B' on "Sale or Return" basis and asked 'B' to return the ring within ten days in case of non approval. 'B' pledged the ring with 'C' without informing 'A' of his approval to purchase the ring. When the price was not paid by 'B', A instituted a suit against 'C' to recover the ring. Decide.

'ಅ'ನು 'ಬ'ನಿಗೆ ಒಂದು ಬಂಗಾರದ ಉಂಗುರವನ್ನು "ಮಾರಾಟ ಅಥವಾ ಮರಳಿಸುವಿಕೆ" ಆಧಾರದ ಮೇಲೆ ಕೊಟ್ಟನು ಮತ್ತು ಅದನ್ನು ಒಪ್ಪದಿದ್ದರೆ ಹತ್ತು ದಿನಗಳೊಳಗಾಗಿ ಮರಳಿಸಲು ತಿಳಿಸಿದನು. 'ಬ'ನು ಉಂಗುರವನ್ನು ಖರೀದಿಸುವ ಸಮ್ಮತಿಯನ್ನು 'ಅ'ನಿಗೆ ತಿಳಿಸದೆ 'ಕ'ನಲ್ಲಿ ಗಿರವಿ (ಒತ್ತೆ) ಇಟ್ಟನು. 'ಬ'ನು 'ಅ'ನಿಗೆ ಹಣ ಸಂದಾಯ ಮಾಡದಿದ್ದಾಗ 'ಅ'ನು 'ಕ'ನ ವಿರುದ್ಧ ಉಂಗುರ ಮರಳಿ ಪಡೆಯಲು ದಾವೆ ಹೂಡಿದನು. ನಿರ್ಣಯಿಸಿರಿ.

(c) 'A' and 'B' agree to work together as carpenters. According to the agreement, 'A' shall receive all profits and shall pay Rs. 10,000/- per month to 'B' as wages. Whether 'A' and 'B' are partners ? Decide.

'ಅ' ಮತ್ತು 'ಬ' ಇವರು ಒಟ್ಟಿಗೆ ಬಡಿಗತನದ ಕೆಲಸವನ್ನು ಮಾಡಲು ಒಪ್ಪಿಕೊಳ್ಳುತ್ತಾರೆ. ಒಪ್ಪಂದದ ಪ್ರಕಾರ 'ಅ'ನು ಎಲ್ಲಾ ಲಾಭವನ್ನು ಪಡೆದು 'ಬ'ನಿಗೆ ಪ್ರತಿ ತಿಂಗಳು ಹತ್ತು ಸಾವಿರ ರೂಪಾಯಿ ಸಂಬಳ ಕೊಡಬೇಕು. 'ಅ' ಮತ್ತು 'ಬ' ಪಾಲುದಾರರಾಗುತ್ತಾರೆಯೇ ? ನಿರ್ಣಯಿಸಿರಿ.